# ಸಾತ್ವಿಕ ಹಬ್ಬಗಳ ಆಚರಣೆ ಹೆಚ್ಚಲಿ: ಸ್ವರ್ಣವಲ್ಲೀ ಶ್ರೀ

ಪ್ರಜಾವಾಣಿ ವಾರ್ತೆ



ಶಿರಸಿಯಲ್ಲಿ ಆಯೋಜಿಸಿದ್ದ ಯುಗಾದಿ ಉತ್ಸವ ಕಾರ್ಯಕ್ರಮಕ್ಕೆ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಬಣ್ಣದಮಠದ ಶಿವಲಿಂಗ ಸ್ವಾಮೀಜಿ ಚಾಲನೆ ನೀಡಿದರು

ಶಿರಸಿ: ಸ್ವೇಚ್ಛತೆಗೆ ಮೂಲವಾಗಿರುವ ಪ್ರೇಮಿಗಳ ದಿನ ಆಚರಣೆ ನಿಂತರೆ ದೇಶಕ್ಕೆ ಒಳಿತಾಗುತ್ತದೆ. ಜತೆಗೆ ವಿವಾಹದ ಜಟಿಲತೆ ಕೂಡ ಕಡಿಮೆಯಾಗಲಿದೆ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ನಗರದ ಮಾರಿಕಾಂಬಾ ಪ್ರೌಢಶಾಲಾ ಆವರಣದಲ್ಲಿ ಮಂಗಳವಾರ ಯುಗಾದಿ ಉತ್ಸವ ಸಮಿತಿಯ 26ನೇ ವರ್ಷದ ಉತ್ಸವಾಚರಣೆ ವೇದಿಕೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವದಿಸಿದರು.

‘ಯುಗಾದಿ ಎಂದರೆ ನೆನಪಾಗುವುದು ಬೇವು-ಬೆಲ್ಲ. ಇದರ ಅರ್ಥ ಜೀವನದಲ್ಲಿ ಸುಖ, ದುಃಖ ಎರಡು ಇದೆ. ಜೀವನದಲ್ಲಿಯೂ ಸಹ ಕಷ್ಟಗಳು ಜಾಸ್ತಿ, ಸುಖಗಳು ಕಡಿಮೆ. ಬೆಲ್ಲ ಮೊದಲಿಲ್ಲ ಬೇವು ಮೊದಲ ಪದವಿದೆ. ಹಾಗೆಯೇ ಜೀವನದಲ್ಲಿಯೂ ಕಷ್ಟ ಮೊದಲು ಎದುರಾಗುತ್ತವೆ. ನಂತರದಲ್ಲಿ ಸುಖ ದೊರೆಯುವುದು’ ಎಂದರು.

‘ಸಾತ್ವಿಕ ಹಬ್ಬಗಳ ಆಚರಣೆ ಹೆಚ್ಚಬೇಕು. ಕೇವಲ ಸಂತೋಷದ ಉದ್ದೇಶ ಇರಬಾರದು. ಉನ್ಮಾದ ಹುಟ್ಟಿಸುವ ಸಡಗರ ಇರಬಾರದು ಎಂದ ಅವರು, ಬದುಕಿನ ಹಾದಿ ತಪ್ಪುವ ಹೆಜ್ಜೆ ಇಡಬಾರದು. ನಮ್ಮ ವರ್ಷದ ಆರಂಭ ಯುಗಾದಿ ಎನ್ನುವ ಭಾವನೆ ಪ್ರತಿಯೊಬ್ಬರಲ್ಲಿ ಬೆಳೆಯಲಿ’ ಎಂದು ಹೇಳಿದರು.

ಬಣ್ಣದಮಠದ ಶಿವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ‘ಜಗತ್ತಿಗೆ ಸಂಸ್ಕೃತಿ ಪಾಠ ಮಾಡಿದ ನಮ್ಮ ದೇಶವು ಶಿಕ್ಷಣದಲ್ಲಿ ಮಾತ್ರ ಪಾಶ್ಚಾತ್ಯ ಸಂಸ್ಕೃತಿ ಅಳವಡಿಸುವುದು ಬೇಸರದ ಸಂಗತಿ. ನಮ್ಮ ದೇಶದ ಸಂಸ್ಕೃತಿಯನ್ನು ಪಠ್ಯದಲ್ಲಿ ಹಾಕುವ ಕೊರತೆ ನಮ್ಮ ದೇಶವನ್ನಾಳುವ ಜನಪ್ರತಿಧಿಗಳಿಗಿದೆ. ಇಂದಿನ ಶಿಕ್ಷಣದಲ್ಲಿ ನೈತಿಕ ಮೌಲ್ಯ ಕುಸಿಯುತ್ತಿದ್ದು, ಜಗತ್ತಿಗೆ ಗುರುವಾದ ನಮ್ಮ ದೇಶದ ಸಂಸ್ಕೃತಿ ಸಂಪ್ರದಾಯವನ್ನು ಇಂದಿನ ಪೀಳಿಗೆಗೆ ಕೊಡುವಂತಾದರೆ ಭವ್ಯ ಪರಂಪರೆ ಭಾರತದಲ್ಲಿ ಉಳಿಯಲು ಸಾಧ್ಯ’ ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಪ್ರಚಾರಕ ನರೇಂದ್ರ ದಿಕ್ಸೂಚಿ ಮಾತನಾಡಿದರು. ಸಭಾ ಕಾರ್ಯಕ್ರಮದ ನಂತರ ನಾಡಿನ ಸಂಸ್ಕೃತಿ, ಇತಿಹಾಸ ಸಾರುವ ರೂಪಕಗಳು, ಸ್ತಬ್ಧಚಿತ್ರಗಳ ಶೋಭಾಯಾತ್ರೆ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಯುಗಾದಿ ಉತ್ಸವ ಸಮಿತಿ ಅಧ್ಯಕ್ಷ ಶ್ರೀಕಾಂತ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಗಜಾನನ ಸಕಲಾತಿ ಸ್ವಾಗತಿಸಿದರು. ಎಂ.ಎಂ.ಭಟ್ ನಿರೂಪಿಸಿ, ವಂದಿಸಿದರು.